# 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾಸನ

ಎಸ್ ಸಿ ನಂ. 65/2020

2ನೇ ಆಗಸ್ಟ್ 2021

**ಪಿರ್ಯಾದಿ : ಅರಸೀಕೆರೆ ನಗರ ಪೋಲೀಸ್ ಠಾಣೆ**

**:ವಿರುದ್ಧ:**

**ಆರೋಪಿತರು : ಸೋಮಶೇಖರ ಉ: ಸೋಮ**

**ಶ್ರೀಮತಿ ರೂಪ ರಾಮರಾವ್ ಕುಲಕರ್ಣಿ, 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾಸನ, ಆದ ನಾನು ಆರೋಪಿತರಾದ**

**ಸೋಮಶೇಖರ ಉ: ಸೋಮ**<br>**ಬಿನ್ ರಾಜಬೋವಿ,**<br>**26 ವರ್ಷ,**<br>**ಭೀರಗೊಂಡನಹಳ್ಳಿ ಭೋವಿ ಕಾಲೋನಿ,**<br>**ಬಾಣಾವರ ಹೋಬಳಿ, ಅರಸೀಕೆರೆ ತಾಲ್ಲೂಕು.**

**ನಿಮ್ಮ ವಿರುದ್ದ ಹೊರಿಸುವ <u>ದೋಷಾರೋಪಣೆ</u> ಏನೆಂದರೆ:**

**ಅರಸೀಕೆರೆ ನಗರ ಪೋಲೀಸ್ ಠಾಣಾ ವ್ಯಾಪ್ತಿಯ ಮಿನಿ ವಿಧಾನ ಸೌಧದ ಹಿಂಭಾಗದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದ ಮೃತೆ ಮಂಜುಳಾ ರವರು ಸುಮಾರು 12 ವರ್ಷಗಳ ಹಿಂದೆ ಲೋಕೇಶ ಎಂಬುವವರೊಂದಿಗೆ ಮದುವೆಯಾಗಿ ಮೂರು ಮಕ್ಕಳನ್ನು ಹೊಂದಿದ್ದು, ನಂತರ ಆರೋಪಿತರಾದ ನೀವು ಆಕೆಯನ್ನು ಪ್ರೀತಿಸಿ ಗಂಡನೊಂದಿಗೆ ಸಂಸಾರ ಮಾಡಲು ಬಿಡದೆ ಮೃತೆ ಮಂಜುಳಾರವರನ್ನು ಆಗಾಗ್ಗೆ ಮನೆ ಬಿಟ್ಟು ಬರುವಂತೆ ಮಾಡಿ ಜೊತೆಯಲ್ಲಿ ತಿರುಗುತ್ತಿದ್ದು, ಸ್ವಲ್ಪ ದಿನಗಳ ಹಿಂದೆ ಮೃತೆ ಮಂಜುಳ ರವರು ತನ್ನ ಮಕ್ಕಳಾದ ಸಹನ ಮತ್ತು ಕೃಥಾರ್ತ ರವರೊಂದಿಗೆ ಸಾಕ್ಷಿ 16 ಲೋಕೇಶ ಮತ್ತು ಸಾಕ್ಷಿ17 ಅರುಣಕುಮಾರರವರ ಮನೆಯಲ್ಲಿ ಆರೋಪಿತರಾದ ನಿಮ್ಮೊಂದಿಗೆ ವಾಸವಾಗಿದ್ದು, ಆರೋಪಿತರಾದ ನಿಮಗೆ ನಿಮ್ಮ ಮನೆಯವರು ಮದುವೆಯನ್ನು ಮಾಡಲು ನಿಶ್ಚಯಿಸಿದ್ದು, ಸದರಿ ವಿಚಾರದಲ್ಲಿ ಆರೋಪಿತರಾದ ನಿಮಗೂ ಮೃತೆ ಮಂಜುಳಾರವರಿಗೂ ಜಗಳವಾಗಿದ್ದು,**

ಇವಳು ಬದುಕಿದ್ದರೆ ತನ್ನನ್ನು ಮದುವೆಯಾಗಲು ಬಿಡುವುದಿಲ್ಲವೆಂದು ಕೊಲೆ ಮಾಡುವ ಉದ್ದೇಶದಿಂದ ದಿ.21.11.2019 ರಂದು ರಾತ್ರಿ 10.00 ಗಂಟೆಯ ಸಮಯದಲ್ಲಿ ಜಗಳ ತೆಗೆದು ಸೀಮೆ ಎಣ್ಣೆ ಸ್ಟವ್‌ನಿಂದ ಸೀಮೆಎಣ್ಣೆಯನ್ನು ತೆಗೆದುಕೊಂಡು ಮಂಜುಳಾರವರ ಮೇಲೆ ಎರಚಿ ಬೆಂಕಿಯನ್ನು ಹಚ್ಚಿದ್ದು, ನಂತರ ಮೃತಳನ್ನು ಚಿಕಿತ್ಸೆಯ ಸಂಭಂದ ಆಸ್ಪತ್ರೆಗೆ ದಾಖಲು ಮಾಡಿದ್ದು, ದಿ.22.112019 ರಂದು ಸಂಜೆ 7.45 ಗಂಟೆ ಸಮಯದಲ್ಲಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಆರೋಪಿತರಾದ ನೀವು ಮಂಜುಳಾರವರನ್ನು ಕೊಲೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 302 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರದ ಪರಿಮಿತಿಯಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ಆರೋಪಗಳು ನನ್ನ ಸಂಜ್ಞೆಗೆ ಒಳಪಡುತ್ತವೆ. ಹಾಗೂ ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳಿಗೆ ಅಧಿವಿಚಾರಣೆಗೆ ಒಳಪಡೆಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

(ರೂಪ ರಾಮರಾವ್ ಕುಲಕರ್ಣಿ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಸನ.